★★★

ಕ್ರೈಂ ಮೀಟಿಂಗ್ ಮುಗಿಯೋವರೆಗೂ ಎಸ್‌ಪಿ ಸಾಹೇಬರು ಎಲ್ಲರ ಮೇಲೂ ರೇಗುತ್ತಲೇ ಇದ್ದರು. ಯಾರೂ ಸರಿಯಾಗಿ ಕೆಲಸ ಮಾಡ್ತ ಇಲ್ಲ... ಸೆನ್ಸಿಟಿವ್ ಕೇಸ್‌ಗಳು ಜಾಸ್ತಿಯಾಗ್ತ ಇವೆ. ಎಚ್‌ಬಿಟಿಗಳು, ಸಣ್ಣಪುಟ್ಟ ಕ್ರೈಂಗಳೂ ಹೆಚ್ಚಾಗ್ತ ಇವೆ. ಕಮಿಷನರ್ ಸಾಹೇಬರಿಗೆ ಉತ್ತರ ಹೇಳಿ ಸಾಕಾಗಿದೆ.

ಮೈಗಳ್ಳ ಆಫೀಸರ್‌ಗಳ ಲೀಸ್ಟ್ ಮಾಡಿ. ಅವರನ್ನೆಲ್ಲ ಚಾಮರಾಜನಗರಕ್ಕೋ, ಬೀದರಿಗೋ ಕಳಿಸೋಣ ಅಂದಿದ್ದಾರೆ. ಹೀಗೇ ಆದರೆ ನಿಮಗಷ್ಟೇ ಅಲ್ಲ ನಂಗೂ ಕಷ್ಟ ಆಗುತ್ತೆ. ನಿಮಗೇನಾದರೂ ಪ್ರಾಬ್ಲಂ ಇದ್ದರೆ ಹೇಳಿ. ಫೋರ್ಸ್ ಸಾಕಾಗಲ್ಲ ಅಂದರೆ ರೂರಲ್ ಸ್ಟೇಷನ್‌ಗಳಿಂದ ಕರೆಸೋಣ. ನೀವು ಏನು ಮಾಡ್ತೀರೊ ಗೊತ್ತಿಲ್ಲ. ಕ್ರೈಂ ರೇಟ್ ಕಡಿಮೆ ಆಗಬೇಕು.

ಮುಂದಿನ ತಿಂಗಳು ಇಬ್ಬರು ವಿಐಪಿಗಳು ಬರೋ ಪ್ರೋಗ್ರಾಂ ಇದೆ. ಅವರು ಯಾರು ಅನ್ನೋದು ಸೀಕ್ರೆಟ್ ಆಗಿ ಇಟ್ಟಿದ್ದಾರೆ. ಅವರು ಬಂದಾಗ ಏನೂ ಆಗದಂತೆ ನೋಡಿಕೊಳ್ಳಬೇಕು. ಇಬ್ಬರಿಗೂ ಲೈಫ್ ತ್ರೆಟ್ ಇದೆಯಂತೆ ನಮ್ಮ ಇಂಟೆಲಿಜೆನ್ಸ್ ವಿಂಗ್ ಸರಿಯಾಗಿ ಕೆಲಸ ಮಾಡ್ತಿಲ್ಲ ಅಂತ ಕಮಿಷನರ್ ಸಾಹೇಬರು ಹೇಳ್ತಲೇ ಇದ್ದಾರೆ. ಹೊರಗಿನಿಂದ ದೊಡ್ಡ ಸಂಖ್ಯೆಯಲ್ಲಿ ಜನ ಸಿಟಿಗೆ ಬರ್ತಿರೋದರಿಂದ ಕಷ್ಟ ಆಗ್ತಿದೆ ಅಂತ ನಂಗೊತ್ತು. ವಿಐಪಿಗಳು ಬಂದು ಹೋಗೋವರೆಗೆ ನೀವೆಲ್ಲ ಹೆಚ್ಚು ಅಲರ್ಟ್ ಆಗಿರಬೇಕು. ಹೊರಗಿನಿಂದ ಬರೋ ಜನರು ಇಲ್ಲಿ ಏನ್ಮಾಡ್ತಾರೆ ಅನ್ನೋ ಕಡೆಗೂ ಗಮನ ಕೊಡಿ... ಅನುಮಾನ ಬಂದ್ರೆ ಮುಲಾಜಿಲ್ಲದೆ ಸ್ಟೇಷನ್ನಿಗೆ ಕರೆಸಿ ವಿಚಾರಿಸಿ... ಹೀಗೆ ಒಂದೇ ಸಮನೆ ಮಾತುಮಾತಿಗೆ ಅಸಹನೆ ಹೊರಹಾಕುತ್ತ ಎಚ್ಚರಿಸುತ್ತಲೇ ಇದ್ದರು.

ಸಾಮಾನ್ಯವಾಗಿ ವೀಕೆಂಡ್‌ನ ಕ್ರೈಂ ಮೀಟಿಂಗ್‌ಗಳು ಸಲೀಸಾಗಿ ನಡೆದು ಎಲ್ಲರೂ ನಗುತ್ತ ಹೊರಬರುತ್ತಿದ್ದರು. ಆದರೆ ಈ ಸಲ ಸಾಹೇಬರು ಮೀಟಿಂಗ್ ಮುಗಿದ ಮೇಲೆ ಒಬ್ಬೊಬ್ಬರನ್ನೇ ಕರೆಸಿ ಒನ್ ಟು ಒನ್ ಮಾತಾಡಿದ್ದರಿಂದ ಎಲ್ಲರ ಎದೆ ಬಡಿತ ಹೆಚ್ಚಾಯಿತು.

ಆಮೇಲೆ ಎಲ್ಲರೂ ಎಸಿಪಿ ಮುತ್ತಣ್ಣ ಚೇಂಬರ್‌ನಲ್ಲಿ ಸೇರಿದರು. ಸಿಟಿಯೊಳಕ್ಕೆ ಬರೋರ ಹಿನ್ನೆಲೆಗಳನ್ನು ಅವರ ಮುಖ ನೋಡಿ ಅರ್ಥ ಮಾಡಿಕೊಳ್ಳೋಕೆ ಆಗುತ್ತಾ ಸಾರ್... ಎಂದು ಬಹಿರಂಗವಾಗಿ ಮುತ್ತಣ್ಣ ಅವರಿಗೆ ಹೇಳಿ ಸ್ವಲ್ಪ ಹೊತ್ತು ಚರ್ಚೆ ಮಾಡಿದರು.

ಇವತ್ತು ಸಾಹೇಬರು ಮೂಡೌಟ್ ಆಗಿದ್ದೇಕೆ ಅನ್ನೋದು ನಂಗೂ ಗೊತ್ತಿಲ್ಲ... ನಿನ್ನೆಯಿಂದ ರೇಗ್ತಾನೇ ಇದ್ದಾರೆ. ಸಿಟಿಯೊಳಕ್ಕೆ ಬ್ಯಾಡ್ ಎಲಿಮೆಂಟ್‌ಗಳು ಬಂದಿರಬಹುದು ಅನ್ನೋ ಇನ್ಫರ್ಮೇಷನ್ ಬಂದಿರಬಹುದು. ನಿನ್ನೆ ಕಡಪಾದ ಎಸ್‌ಪಿ ಸಾಹೇಬರು ಫೋನ್ ಮಾಡಿದ್ದರಂತೆ. ಅವರೇನಾದರೂ ಕ್ಲೂ ಕೊಟ್ಟಿರಬಹುದು. ಸಿಟಿಯೊಳಕ್ಕೆ ಬಂದಿರೋರು ಟೆರರಿಸ್ಟ್‌ಗಳಾ ಅಥವಾ ಸುಪಾರಿ ಕಿಲ್ಲರ್‌ಗಳಾ ಗೊತ್ತಿಲ್ಲ. ಒಟ್ಟಿನಲ್ಲಿ ಎಲ್ಲ ಕಡೆ ಹುಡುಕಿ. ಅನುಮಾನ ಬಂದರೆ ಕರೆಸಿ ವಿಚಾರಿಸಿ ಎಂದು ಹೇಳುತ್ತ ಮುತ್ತಣ್ಣ ಅನೌಪಚಾರಿಕ ಮೀಟಿಂಗ್ ಮುಗಿಸಿದರು.

ಸಿಟಿ ರಸ್ತೆಗಳಲ್ಲಿ ರಾಯಲ್ ಎನ್‌ಫೀಲ್ಡ್‌ಗಳು, ಬೈಕುಗಳು, ಜೀಪುಗಳು ಸದ್ದು ಮಾಡುತ್ತ ಓಡಾಡಿವು. ನಿತ್ಯವೂ ಪಕ್ಕದ ರಾಜ್ಯದಿಂದ ಗಡಿ ದಾಟಿ ನೂರಾರು ಜನ ಬರ್ತಾರೆ, ಹೋಗ್ತಾರೆ... ಬಾರ್ಡರ್ ಜಿಲ್ಲೆಗಳಲ್ಲಿ ಇದೆಲ್ಲ ಮಾಮೂಲು. ಬಂದರವರನ್ನೆಲ್ಲ ಸ್ಟೇಷನ್ನಿಗೆ ಕರೆಸಿ ವಿಚಾರಿಸೋಕೆ ಆಗಲ್ಲ ಅಂತ ಎಸ್‌ಪಿ ಸಾಹೇಬರಿಗೆ ಹೇಳೋದು ಹೇಗೆ? ಮುಂದಿನವಾರ ರಾಜಮೌಳಿ ಸಿನಿಮಾ ಇಲ್ಲಿನ ಮೂರು ಥೇಟರ್‌ಗಳಲ್ಲಿ ರಿಲೀಸ್ ಆಗುತ್ತಂತೆ. ನೋಡೋಕೆ ಪಕ್ಕದ ಸ್ಟೇಟಿನ ಜನರೂ ಬರ್ತಾರೆ. ಏನು ಮಾಡಬೇಕು ಅನ್ನೋದು ಗೊತ್ತಾಗುತ್ತಿಲ್ಲ ಅಂತ ಇನ್‌ಸ್ಪೆಕ್ಟರುಗಳು ಕೈ ಕೈ ಹಿಸುಕಿಕೊಂಡರು.

ಲಾಡ್ಜ್‌ಗಳಲ್ಲಿ ರೂಮು ಮಾಡಿಕೊಂಡು ಶೋಕಿ ಮಾಡೋಕೆ, ಜೂಜು ಆಡೋಕೆ ಅಂತ